**ಓ.ಎಸ್. ನಂ. 62/2021** **ಡಿ.ಡಬ್ಲ್ಯೂ- 4**

**ಸಾಕ್ಷಿಯನ್ನು ದಿನಾಂಕ 19.6.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಬಿ.ಎಲ್.ಟಿ ವಕೀಲರಿಂದಃ

ನನಗೆ ವಾದಿಯು 20 ವರ್ಷಗಳಿಂದ ಪರಿಚಯಸ್ಥರಾಗಿರುತ್ತಾರೆ. ಈ ದಾವೆಯಲ್ಲಿ 16 ಜನ ಪ್ರತಿವಾದಿಗಳು ಇರುತ್ತಾರೆ. ಪ್ರತಿವಾದಿಯರ ಹೆಸರು ಮರೆತು ಹೋಗಿರುತ್ತದೆ. ನಿಪಿ3 ದಾಖಲೆಯಾದ ದಿನ ಪ್ರತಿವಾದಿಯರನ್ನು ನೋಡಿರುತ್ತೇನೆ. ಅದನ್ನು ಹೊರತುಪಡಿಸಿ ಬೇರೆ ದಿನ ನೋಡಿರುವುದಿಲ್ಲ. ನಿಪಿ3 ದಾಖಲೆಯನ್ನು ತಯಾರಿಸಲು ವಾದಿ ಮತ್ತು ಪ್ರತಿವಾದಿಯರು ಮಾಹಿತಿಯನ್ನು ನೀಡಿರುತ್ತಾರೆ. ಸದರಿ ದಾಖಲೆಯನ್ನು ತಯಾರಿಸುವ ಪೂರ್ವದಲ್ಲಿ ಪಹಣಿಯನ್ನು ಮಾತ್ರ ನೋಡಿರುತ್ತೇನೆ. ಪಹಣಿಯಲ್ಲಿ 1 ರಿಂದ 4 ನೇ ಪ್ರತಿವಾದಿಯರ ಹೆಸರು ಇತ್ತು. ಪ್ರತಿವಾದಿಯರನ್ನು ಹೊರತುಪಡಿಸಿ ದಾವಆಸ್ತಿಗೆ ಬೇರೆ ಯಾವ ಹಕ್ಕುದಾರರು ಇರುತ್ತಾರೆ ಎಂದು ನಾನು ವಿಚಾರಣೆ ಮಾಡಿರುವುದಿಲ್ಲ. ದಾವಆಸ್ತಿಯ ವಿಸ್ತೀರ್ಣ 4 ಎಕರೆ ಆಗಿರುತ್ತದೆ. ಯಾವ ಊರಿನಲ್ಲಿ ಜಮೀನು ಎಷ್ಟು ಬೆಲೆ ಬಾಳುತ್ತದೆ ಎಂಬ ಮಾಹಿತಿ ನನಗೆ ಇರುತ್ತದೆ. ನಿಲುವಾಗಿಲು ಗ್ರಾಮದಲ್ಲಿ 2019 ರಲ್ಲಿ ಪ್ರತಿ ಎಕರೆಗೆ 3 ಲಕ್ಷ ರೂ. ಬೆಲೆ ಇತ್ತು. ವಾದಿ ಮತ್ತು 1 ರಿಂದ 4 ನೇ ಪ್ರತಿವಾದಿಯರು ಕರಾರುಪತ್ರಕ್ಕೆ ಮಾಹಿತಿಯನ್ನು ನೀಡಿರುತ್ತಾರೆ. ಆಸ್ತಿಯು ಖಾತೆದಾರರ ಸ್ವಾಧೀನದಲ್ಲಿತ್ತು ಎಂದು ತಿಳಿದುಕೊಂಡಿರುತ್ತೇನೆ. ಕರಾರುಪತ್ರದಲ್ಲಿ ಆಸ್ತಿಯ ಸ್ವಾಧೀನವನ್ನು ನೀಡಿರುವುದಿಲ್ಲ. ನಿಪಿ3 ದಾಖಲೆಯನ್ನು ಪ್ರತಿವಾದಿಯರು ಬಂದ ನಂತರ ತಯಾರಿಸಿರುತ್ತೇನೆ. ಅದನ್ನು ತಾಲ್ಲೂಕು ಕಛೇರಿ ಮುಂಭಾಗದಲ್ಲಿರುವ ನನ್ನ ಕಛೇರಿಯಲ್ಲಿ ತಯಾರಿಸಿರುತ್ತೇನೆ. ಆಸ್ತಿಯನ್ನು ಒಟ್ಟು 12 ಲಕ್ಷಕ್ಕೆ ಮಾರಾಟ ಮಾಡಲು ಮಾತುಕತೆಯಾಗಿದ್ದು, ಅದರ ಪೈಕಿ ತಲಾ 1 ಲಕ್ಷದ ಎರಡು ಚೆಕ್ಕುಗಳು ಹಾಗೂ 2 ಲಕ್ಷ ನಗದನ್ನು ಮುಂಗಡವಾಗಿ ನೀಡಿರುತ್ತಾರೆ. ನಿಪಿ3 ಕ್ಕೆ ಸಹಿ ಮಾಡಿರುವ ಸಾಕ್ಷಿದಾರರನ್ನು ಪ್ರತಿವಾದಿಯರು ಕರೆದುಕೊಂಡು ಬಂದಿದ್ದರು. ಎಲ್ಲ ಪಕ್ಷಗಾರರು ಹಾಗೂ ಸಾಕ್ಷಿದಾರರು ಜೊತೆಯಲ್ಲಿ ಬಂದಿದ್ದರು. ಪತ್ರ ತಯಾರಿಸಲು 1 ಗಂಟೆ ಸಮಯ ಬೇಕಾಗಿತ್ತು. ಸಾಮಾನ್ಯವಾಗಿ ನಾನು ಯಾವುದೇ ದಾಖಲೆಗೆ ಇಬ್ಬರು ಸಾಕ್ಷಿದಾರರ ಸಹಿ ಮಾಡಿಸುತ್ತೇನೆ. ನಿಪಿ3 ರಲ್ಲಿ ಮೂರನೇ ಸಾಕ್ಷಿದಾರರ 3 ಎಂಬ ನಂಬರನ್ನು ನಂತರ ಸೇರಿಸಲಾಗಿರುತ್ತದೆ. ಸದರಿ 3 ಎಂಬ ಅಂಕೆಯನ್ನು ತಿದ್ದಲಾಗಿರುತ್ತದೆ ಎಂದರೆ ಸರಿ. ನಿಪಿ3 ದಾಖಲೆಗೆ ಪ್ರತಿವಾದಿಯರು ಹಾಗೂ ಸಾಕ್ಷಿದಾರರು ಸಹಿ ಮಾಡಿರುತ್ತಾರೆ, ಬೇರೆ ಯಾರು ಸಹಿ ಮಾಡಿರುತ್ತಾರೆ ಎಂದು ಮರೆತು ಹೋಗಿರುತ್ತದೆ. ವಾದಿಯು ನನ್ನ ಬಳಿ ಬೇರೆ ಯಾವುದೇ ಪತ್ರವನ್ನು ಬರೆಸಿರುವುದಿಲ್ಲ. ನಿಡಿ2 ರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿದಾರರು ಸದರಿ ಸಹಿಯನ್ನು ನೋಡಿ ಒಪ್ಪಿದ್ದರಿಂದ ಅದನ್ನು ನಿಡಿ2 ಬಿ ಎಂದು ಗುರುತಿಸಲಾಯಿತು. ವಾದಿಯು ಲೇವಾದೇವಿ ವ್ಯವಹಾರ

ಮಾಡುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. 2 ನೇ ಸಾಕ್ಷಿ ಮಹದೇವಪ್ಪ ರವರ ಪರಿಚಯವಿರುತ್ತದೆ. ಅವರು ತಾಲ್ಲೂಕು ಕಛೇರಿ ಹಾಗೂ ಸಬ್ ರಿಜಿಸ್ಟ್ರಾರ್ ಕಛೇರಿಗೆ ಬರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು, ವಾದಿ ಮತ್ತು ಮಹದೇವಪ್ಪ ಸೇರಿಕೊಂಡು ಪ್ರತಿವಾದಿಯರಿಗೆ ಮೋಸ ಮಾಡಲು ಸುಳ್ಳು ದಾಖಲೆಯನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. 2019 ರಲ್ಲಿ ದಾವಆಸ್ತಿಯ ಬೆಲೆ ಪ್ರತಿ ಎಕರೆಗೆ 15 ಲಕ್ಷ ಇತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ವಾದಿಯು ನನಗೆ ಸಾಕ್ಷಿ ನುಡಿಯಲು ಕರೆದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ವ್ಯವಹಾರವಾಗಿರುವುದಿಲ್ಲ, ನಿಪಿ3 ನ್ನು ಸೃಷ್ಟಿಸಲಾಗಿರುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.